

‘ನಿಜ ಅಂತ ಕೋರ್ಟಿನಲ್ಲಿಯೆ ಶಿಕ್ಷೆಯಾಗಿದೆಯಲ್ಲ?’ ಆತನ ಉತ್ತರ ಸ್ಪಷ್ಟವಾಗಿತ್ತಲ್ಲದೆ ಅದನ್ನು ಹೇಗಾದರೂ ಅರ್ಥ ಮಾಡಿಕೊಳ್ಳಬಹುದಾಗಿತ್ತು. ಹನ್ನೆರಡು ವರ್ಷದ ಹಿಂದಿನ ಕೊಲೆ ಮತ್ತು ತೀರ್ಪಿನ ಪೂರ್ಣ ವಿವರದ ಅರಿವಿದ್ದ ಪತ್ರಕರ್ತರ್‍ಯಾರೂ ಇಲ್ಲವಾದ್ದರಿಂದ ಮತ್ಯಾರೂ ಆ ಪ್ರಶ್ನೆ ಕೇಳುವ ಧೈರ್ಯ ಮಾಡಲಿಲ್ಲ.

‘ಬಿಡುಗಡೆಯಾಗಿ ಎಷ್ಟು ಕಾಲವಾಯಿತು?’

‘ಆರು ತಿಂಗಳಾಯಿತು.’

‘ಇರಲಿ, ಹನ್ನೆರಡು ವರ್ಷ ಜೈಲಿನಲ್ಲಿದ್ದಿರಿ ಎಂದಾಯಿತು. ಸಂಗೀತವನ್ನ ನೀವು ಅಭ್ಯಾಸ ಮಾಡಿದ್ದು ಯಾವಾಗ, ಎಲ್ಲಿ?’